ಶ್ರೀ ಡಿ. ನಾರಾಯಣದಾಸ.—ಹರಿಜನ ಗಿರಿಜನರಿಗೆ ಪ್ರತಿ ತಾಲ್ಲೂಕಿನಲ್ಲೂ ಎಷ್ಟು ಭೂಮಿ ಕಾದಿರಿಸಲಾಗಿದೆ ಎಂದು ನಾನು ಕೇಳಿದ್ದಕ್ಕೆ ಉತ್ತರ ಕೊಟ್ಟಿಲ್ಲ. ಹರಿಜನ-ಗಿರಿಜನರಿಗೆ ಎಷ್ಟು ಭೂಮಿ ಹಂಚಲಾಗಿದೆ ಎಂಬುದನ್ನು ತಿಳಿಸುವಿರಾ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹತ್ತನೆಯ ಪುಟದಲ್ಲಿ ಪರಿಶಿಷ್ಟದಲ್ಲಿ ಅದನ್ನು ಕೊಡಲಾಗಿದೆ, ಅದನ್ನು ನೋಡಬಹುದು.

ಶ್ರೀ ಡಿ. ನಾರಾಯಣದಾಸ.—ಹರಪನಹಳ್ಳಿ, ಹಡಗಲಿ, ಮಲ್ಲಾಪುರ ಮತ್ತು ಕೂಡ್ಲಿಗಿ ತಾಲ್ಲೂಕುಗಳ ೫೫ ಹಳ್ಳಿಗಳಲ್ಲಿ ಒಂದು ವರ್ಷದಿಂದ ಜಮೀನನ್ನು ಹಂಚಿಲ್ಲ. ತುಂಗಭದ್ರ ಆಣೆಕಟ್ಟಿನಲ್ಲಿ ಹೂಳು ತುಂಬುತ್ತಿದೆ, ಮೂರುನಾಲ್ಕು ತಾಲ್ಲೂಕು ಗಳಲ್ಲಿ ಒಂದು ಸೆಂಟು ಭೂಮಿ ಕೂಡ ಹಂಚಿಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಡಗಲಿ, ಹರಪನಹಳ್ಳಿ, ಮಲ್ಲಾಪುರ ತಾಲ್ಲೂಕುಗಳ ಭಾಗ ತುಂಗಭದ್ರ ಜಲಾನಯನ ಪ್ರದೇಶವಾಗಿರುವುದರಿಂದ ಅಲ್ಲಿ ವ್ಯವಸಾಯಕ್ಕೆ ಭೂಮಿ ಕೊಟ್ಟರೆ ಹೆಚ್ಚು ಅದಿರು ಬಂದು ತುಂಬುವುದು ಎಂದು ಅದಕ್ಕೆ ಬಂಡು ಹಾಕುವುದು ಅಫಾರೆಸ್ಟೇಷನ್ ಮಾಡುವುದು ಮುಂತಾದ ಕಾರ್ಯ ಕ್ರಮ ಮುಂದುವರೆಸಬೇಕು ಎಂಬ ಯೋಜನೆಯಿರುವುದರಿಂದ ಯಾರಿಗೂ ಹಂಚಿಲ್ಲ.

ಶ್ರೀ ಡಿ. ನಾರಾಯಣದಾಸ.—ತಾಲ್ಲೂಕಿನಲ್ಲಿರುವ ಎಲ್ಲಾ ಭೂಮಿಯೂ ತುಂಗಭದ್ರ ಆಣೆಕಟ್ಟಿಗೆ ಬೇಕೇ ಅಥವಾ ಇಂತಿಷ್ಟು ಸರ್ವೆ ನಂಬರು ಬೇಕು ಎಂದು ಹೇಳುವುದಾದರೆ ಅದನ್ನು ಸೂಚಿಸುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಗ ಇರುವ ಒಟ್ಟು ಭೂಮಿಯನ್ನು ಕಾದಿರಿಸಲಾಗಿದೆ. ಮಾನ್ಯ ಸದಸ್ಯರು ಈಗ ಒಂದು ಸಲಹೆ ಮಾಡುತ್ತಿದ್ದಾರೆ. ಒಟ್ಟು ಭೂಮಿ ಏನಿದೆ ಅದನ್ನೆಲ್ಲಾ ಕಾಡು ಬೆಳೆಸುವುದಕ್ಕೆ ಅಥವ ಬಂಡು ಹಾಕು ವುದಕ್ಕೆ ಇಟ್ಟುಕೊಳ್ಳಬೇಕೇ ಅಥವಾ ಕೆಲವು ಭೂಮಿ ವ್ಯವಸಾಯಕ್ಕೆ ಕೊಡಬಹುದೇ ಎಂಬುದನ್ನು ಪರಿಶೀಲಿಸುತ್ತೇವೆ.

TANK AT THUMBIGERE-AGASANKATTE VILLAGE

902. Smt.NAGAMMA C. KESHAVAMURTHY (Davanagere).—Will the Minister for Public Works and Electricity be pleased to state.—

(*a*) the amount spent for the construction of tank at Thumbigere-Agasankatte village in Davanagere Taluk;

---

†Indicate that remarks or speeches have not been revised by the Member concerned.

(*b*) the area of the land irrigatted by this Tank;

(*c*) whether the channels for supplying water to these lands have been completed;

(*d*) if not, the period within which the channels work will be completed ?

Sri H. M. CHANNABASAPPA (Minister for Public Works and Electricity).—

(*a*) Rs. 4,79,627.25 P.

(*b*) Atchkat is not yet developed since the channel work is under progress.

(*c*) The Right Bank Channel work is completed. The Left Bank Channel work is under progress.

(*d*) The Left Bank Channel work is expected to be completed by the end of July 1973.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈ ಕೆರೆ ಕೆಲಸ ಪ್ರಾರಂಭವಾಗಿ ಎಷ್ಟು ವರ್ಷವಾಗಿದೆ? ಕೆಲಸ ಮುಗಿದು ಎಷ್ಟು ವರ್ಷವಾಗಿದೆ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಗೇಟಲ್-ಟ್ಯಾರಲ್ಲಿ ಅಂದಾಜು ಮಂಜೂರಾಗಿದೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ನನಗೆ ತಿಳಿದ ಹಾಗೆ ಈ ಕೆರೆಯ ಕೆಲಸ ಪೂರ್ಣವಾಗಿ ೩ ವರ್ಷವಾಗಿದೆ. ಛಾನಲ್ ಕೆಲಸ ತೆಗೆದುಕೊಳ್ಳದಿರುವದರಿಂದ ಇದು ವರೆಗೆ ಬಹಳ ವೆಚ್ಚ ಮಾಡಿದ್ದರೂ ಉಪಯೋಗವಾಗಿಲ್ಲ. ಈ ವಿಳಂಬಕ್ಕೆ ಕಾರಣವೇನು? ಬೇಗನೆ ಛಾನಲ್ ಕೆಲಸ ಮುಗಿಸಿ ನೀರನ್ನೊದಗಿಸಲು ಪ್ರಯತ್ನ ಮಾಡುವಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಛಾನಲ್ ಕೆಲಸ ತಕ್ಷಣ ಮುಗಿಸಲು ಗಮನ ಕೊಡಬೇಕೆಂಬ ಆಶಯವಿದೆ. ಆದರೆ ಛಾನಲ್ ತೆಗೆಯಬೇಕಾದರೆ ಅದಕ್ಕೆ ಯಾವ ಜಮೀನು ಬೇಕಾಗಿದೆ. ಅದಕ್ಕೆ ಸಂಬಂಧಪಟ್ಟವರ ತಕರಾರು ಇರುವದರಿಂದ ಕೆಲಸ ನಿಧಾನವಾಗಿದೆ. ಆಫೀಸರುಗಳು ಇದಕ್ಕೆ ಸಂಬಂಧಪಟ್ಟವರು ಯಾರಿದ್ದಾರೋ ಅವರಿಗೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಬೇಗನೆ ಬೇಕಾದ ಜಮೀನು ಮಾಲೀಕರಿಗೆ ಪರಿಹಾರ ಕೊಡಬೇಕು ಎಂದು ತಿಳಿಸಿದೆ. ಬಹುಶಃ ಜುಲೈ ನಲ್ಲಿ ನೀರನ್ನು ಕೊಡಲು ಸಾಧ್ಯವಾಗಬಹುದು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಇದೇ ರೀತಿಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಕೆಲವು ಕೆರೆಗಳ ಕೆಲಸ ವಿಳಂಬವಾಗುತ್ತಿದೆ ಮತ್ತು ಇದರಿಂದ ಸಾರ್ವಜನಿಕರಿಗೆ ಉಪಯೋಗವಾಗುತ್ತಿಲ್ಲ. ಇವುಗಳ ಕೆಲಸ ತ್ವರಿತವಾಗಿ ಪೂರ್ಣಮಾಡಲು ಪ್ರಯತ್ನ ಮಾಡಬೇಕು. ಜಮೀನುದಾರರು ತಮ್ಮ ಜಮೀನನ್ನು ಬಿಟ್ಟು ಕೊಡಲು ತಕರಾರು ಮಾಡುತ್ತಾರೆ ಎಂದು ಹೇಳುವದು ಸರಿಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಿಯಲ್ಲವೆಂದು ಹೇಳುವದಕ್ಕೆ ಆಧಾರವೇನೋ ಗೊತ್ತಿಲ್ಲ. ಭೂಮಿ ಕೊಡದಿದ್ದರೆ ಆಕ್ರಮಣ ಮಾಡಿ ಛಾನಲ್ ಮಾಡುವದಕ್ಕಾಗುವದಿಲ್ಲ. ಭೂಮಿ ಸಿಕ್ಕಿದರೆ ಕೆಲಸ ನಿಲಿಸಬೇಕೆಂಬ ಆಶಯವಿಲ್ಲ.

LIFT IRRIGATION AT RAMANAGULI

926. Smt. RADHA BHAT (Ankola).—Will the Minister for Public Works and Electricity be pleased to state :—

(*a*) Whether the question of providing irrigational facilities to Adalur, Vasara Kudragi, Agasur and other villages through Lift Irrigation at Ramanaguli of Ankola Taluk of N.K.District is under the consideration of the Government;

(*b*) if so, the action proposed to be taken by the Government in this behalf?

Sri H. M. CHANNABASAPPA (Minister for Public Works and Electricity).—

(*a*) and (*b*) After the preliminary investigation as this scheme was found to be technically not feasible the same is dropped the present.

ಶ್ರೀಮತಿ ರಾಧಾ ಭಟ್.—ಈ ನೀರಾವರಿ ಯೋಜನೆಯ ಬಗ್ಗೆ ತಾಂತ್ರಿಕ ಪರಿಶೀಲನೆ ಯಾವಾಗ ಮಾಡಲಾಯ್ತು? ತಾಂತ್ರಿಕವಾಗಿ ಇದು ಯೋಗ್ಯವಲ್ಲ ಎಂದು ಹೇಳಲು ಕಾರಣವೇನು?

†ಶ್ರೀ ಎಚ್. ಎಂ. ಚನ್ನಬಸಪ್ಪ —ತಾಂತ್ರಿಕವಾಗಿ ಯೋಗ್ಯವಲ್ಲ ಎಂಬುದೇ ಕಾರಣ.

ಶ್ರೀಮತಿ ರಾಧಾ ಭಟ್.—ರಾಮನಗುಳಿ ಭಾಗದಲ್ಲಿ ನೀರಾವರಿಯ ಅವಶ್ಯಕತೆ ಬಹಳವಾಗಿರುವದರಿಂದ ಲಿಫ್ಟ್ ಇರಿಗೇಶನ್ ಮುಂತಾದ ಯೋಜನೆಗಳು ಸಾಧ್ಯವಿದ್ದರೆ ಬೇರೆ ಯಾವುದಾದರೂ ಯೋಜನೆ ತೆಗೆದುಕೊಳ್ಳಲು ಸರಕಾರ ಯೋಚನೆ ಮಾಡುವುದೇ? ಇಂಥ ಪರಿಶೀಲನೆ ಏನಾದರೂ ನಡೆದಿದೆಯೇ?